ಹಾಗೆ ಹೊಗಳಲೆಂದೇ ನೇಮಕಗೊಂಡ ಭಟ್ಟರು ಇದ್ದರು. ಈ ಭಟ್ಟರು ಹೇಳುವುದನ್ನೆಲ್ಲ ನಿಜ ಎಂದು ನಂಬಲಾದೀತೆ?

ತಮ್ಮ ದೊಡ್ಡಸ್ತಿಕೆ ತೋರಿಸಲು ಕೆಲವರು 'ಹಂಗೇ ಅಂತಿರತಾರ'. ಇದರಲ್ಲಿ ಜೊಳ್ಳು ಯಾವುದು, ಕಾಳು ಯಾವುದು ಎಂಬುದು ಆನಂತರ ಬಹಿರಂಗಗೊಳ್ಳುತ್ತದೆ. ಯಾವುನೊ ಒಬ್ಬಾತ, 'ಬಂಗಾರ ತಟ್ಟೆಯ ಊಟವೊಲ್ಲೆ, ರೇಷ್ಮೆ ಬಟ್ಟೆಯ ತೊಡಲೊಲ್ಲೆ, ಮೆತ್ತನೆಯ ಹಾಸಿಗೆ ಮೇಲೆ ಮಲಗಲೊಲ್ಲೆ' ಎಂದು ಹೇಳುತ್ತಿದ್ದನಂತೆ. ಅವು ಯಾವುವೂ ತನ್ನ ಬಳಿ ಇಲ್ಲದ್ದಕ್ಕೆ ಆತ ಹಂಗೇ ಅಂತಿರತಾನೆಯೆ ಹೊರತು, ತಾನಾಗಿಯೇ ಒದಗಿಬಂದಲ್ಲಿ ಬೇಡ ಎನ್ನಲು ಆತನೇನೂ ಸನ್ಯಾಸಿಯಲ್ಲ. ಈತ ಸ್ವಪರಾಕು ಪ್ರೇಮಿ. ಸುಳ್ಳಿನ ಮಾಲೆ ಹೆಣೆಯುತ್ತ ತನ್ನ ಬೆನ್ನು ತಾನೇ ಚಪ್ಪರಿಸಿಕೊಳ್ಳುವ ಚಪಲ.

'ನಮ್ಮ ಮನೆಯೊಳಗಿನ ಕೋಳಿ ದಿನಾಬೆಳಗಾದರ ಛಪ್ಪನ್ನ ತತ್ತಿಹಾಕ್ತದ' ಎಂದು ಸುಳ್ಳಿನ ಬಂಡಿ ಉರುಳಿಸುವವನೊಬ್ಬ ನಮ್ಮೂರಲ್ಲಿದ್ದ. ಆತಗೆ 'ಛಪ್ಪನ್ನ ಚೆನ್ನಪ್ಪ' ಅಂಬೊ ಅಡ್ಡಹೆಸರಿತ್ತು. ಹಂಗ ಅಂದು, ಬಡಿವಾರ ತೋರಸ್ತಿದ್ದ, ಅಷ್ಟೇ!

ಇನ್ನೊಂದಿಷ್ಟು ಜನರಿಗೆ ತಮ್ಮ ಬಗ್ಗೆ ತಾವೇ ಹೇಳಿಕೊಳ್ಳುವಲ್ಲಿ ಉಮೇದು ಉಕ್ಕಿಬರುತ್ತದೆ. ಗಣ್ಯವ್ಯಕ್ತಿಗಳಿಗೆ ಇವರು ತುಂಬಾ ಹತ್ತಿರದವರೆನ್ನುವಂತೆ ಓಡಾಡುತ್ತಿರುತ್ತಾರೆ. ಗಣ್ಯಮಹಾನುಭಾವರ ಬಳಿ ನಿಂತು, ಹಲ್ಲುಗಿಂಜುತ್ತ ಫೋಟೊಕ್ಕೆ ಪೋಜು ಕೊಡುತ್ತಾರೆ. ಅದನ್ನೆ ಬಂಡವಾಳ ಮಾಡಿಕೊಂಡು, 'ನೋಡ್ರಿ, ಈ ಮಹಾನುಭಾವರಿಗೆ ನಾನೆಂದರೆ ಅಷ್ಟು ಪ್ರೀತಿ. ನನ್ನ ಕಂಡರೆ ಬಂಗಾರ ಕಂಡಂತೆ ಮಾಡ್ತಾರೆ. ಇಕಾ ಇಲ್ಲಿ ನೋಡಿ, ಅವರು ನನ್ನ ಬಳಿ ಹೇಗೆ ನಗುತ್ತ ನಿಂತಿದ್ದಾರೆ' ಎಂದು ಅದೇ ಫೋಟೊ ತೋರಿಸುತ್ತಾರೆ. ಮುಂದೆ ನಿಮಗೇ ಗೊತ್ತಾಗುತ್ತದೆ, ಇದೆಲ್ಲ ಹಸಿ ಸುಳ್ಳು ಅಂತ. ನೀವೇ ಆ ವ್ಯಕ್ತಿಯನ್ನು, 'ಓಹೋ ಇವರೋ, ಯಾವಾಗ್ಲೂ ಹಂಗೇ ಅಂತಿರತಾರ' ಅನ್ನುವವರ ಸಾಲಿಗೆ ಸೇರಿಸಿಬಿಡುತ್ತೀರಿ...

ನಾನು ಹೈಸ್ಕೂಲಿನಲ್ಲಿ ಓದುತ್ತಿರಬೇಕಾದರೆ, ನನ್ನ ಸಹಪಾಠಿಗಳಲ್ಲಿ ಒಬ್ಬನಿಗೆ ವಿಪರೀತ ಜಂಭಕೊಚ್ಚಿಕೊಳ್ಳುವ ಚಟ. ತಾನು ಧರಿಸಿದ ಬಟ್ಟೆಯ ಕಿಮ್ಮತ್ತು, ಕೈಗೆ ಕಟ್ಟಿಕೊಂಡಿರುವ ವಾಚಿನ ವಿಶೇಷ ಬಣ್ಣಿಸುವಾಗಿನ ಆತನ ಧಿಮಾಕು ನೋಡಬೇಕು.

'ಈ ಶರ್ಟ್ ಮುಂಬೈಯಿಂದ ನಮ್ಮಪ್ಪ ತಂದಾನ ನೂರಾಐವತ್ತು ಕೊಟ್ಟು... ಇದು ಫಾರೀನ್ ಮೇಡ್ ವಾಚ್ ಅದ, ಫಾರೀನ್ ಮೇಡ್... ಹಾಂ...' ಎಂದೆಲ್ಲ ಬಡಾಯಿ ಬಂಡಿ ಓಡಿಸುತ್ತಿದ್ದ. ನಂತರ ಗೊತ್ತಾಯಿತು, ಇದೆಲ್ಲಾ ಬರೀ ಬೊಗಳೆ ಪುರಾಣ ಎಂದು. ಆಮೇಲೆ ಆತ, ಏನೇ ಹೇಳಬಂದರೂ, 'ಏ ಅಂವಾ ಹಂಗೇ ಅಂತಿರತಾನ ಬಿಡ್ರೋ' ಎಂದು ಅವನ ಮಾತುಗಳನ್ನು ಲೇವಡಿ ಮಾಡತೊಡಗಿದೆವು.

ನಮ್ಮೊಳಗಿನ ಕೆಲವರು ಹೇಳುವುದನ್ನು ತಾವು ಕೇಳುವಂತಿರುತ್ತದೆ. 'ಊರಾಗ ಒಂದಿಷ್ಟ ಜನಾ ನಿಮ್ಮ ಬಗ್ಗೆ ಇಲ್ಲ ಸಲ್ಲದ ಮಾತಾಡ್ತಾರ. ಜರಾ ಹುಷಾರೀಲೆ ಇರ್ರಿ' ಎಂದು ಕಾಳಜಿ ತೋರಿಸುತ್ತಾರೆ. ಹಾಗೆನೋಡಿದರೆ, ಅವರು ಹೇಳುವ ಆ ಒಂದಿಷ್ಟು ಮಂದಿ ಇರುವುದೇ ಇಲ್ಲ. ನಮ್ಮಬಗ್ಗೆ ಅವರಿಗೆ ಅದೇನು ಕಾರಿಕೊಳ್ಳಬೇಕೊ ಅದನ್ನೆಲ್ಲ ಕಾರಿಕೊಂಡಾದ ಮೇಲೆ, 'ಮಂದಿ ಮಾತ್ರ ನಿಮ್ಮ ಬಗ್ಗೆ ಹಂಗೇ ಅಂತಿರತಾರ' ಎಂದು ಅಗೋಚರ ಒಂದಿಷ್ಟು ಮಂದಿಯ ಮೇಲೆ ಗೂಬೆಕೂರಿಸುತ್ತಾರೆ.

ಇನ್ನು ಕೆಲವರು, ಹಂಗೇ ಹೇಳತಿರತಾರ ಅನ್ನುವ ಈ ಜೋಡುಶಬ್ದವನ್ನು ತಮ್ಮ ಸುರಕ್ಷತೆಗಾಗಿ ಬಳಸುವದುಂಟು. ತಾವು ಹೇಳಬೇಕಾದುದನ್ನು ಹೇಳಿಯಾದ ಮೇಲೆ, 'ಇದು ನನ್ನ ಅಭಿಪ್ರಾಯವಂತೂ ಅಲ್ಲ ಮಾರಾಯಾ. ಜನಾ ಹಂಗೇ ಅಂತಿರತಾರ ಅನ್ನೋದನ್ನ ನಿನಗ ಹೇಳ್ತಿದೀನಿ ಅಷ್ಟೇ' ಎಂದು ಸಾಫ್ ಎಳೆದು, ಸೇಫ್ ಆಗುವವರು.

ಮೊನ್ನೆ ಹೀಗೆಯೆ ಆಯಿತು. ಅಂದು ನನ್ನ ಹಳೆಯ ದೋಸ್ತಿ ವಿಠ್ಠು ಮನೆಗೆ ಬಂದಿದ್ದ. ಬಹಳ